ಈ) ಸಿರಸಿ ಮತ್ತು ಸಿದ್ದಾಪುರ ತಾಲ್ಲೂಕುಗಳಲ್ಲಿ ಹಳ್ಳಿಯ ಹೆದ್ದಾರಿ ಕಾರ್ಯಕ್ರಮದಲ್ಲಿ ಗುರುತಿಸಿ ತೆಗೆದುಕೊಳ್ಳಬೇಕಾದ ಕೆಲಸಗಳ ವಿವರ:

ಅ) ಸಿರಸಿ ತಾಲ್ಲೂಕು. — ೧) ಕೂಡಲಗಿ ಗ್ರಾಮಕ್ಕೆ ಕೂಡು ರಸ್ತೆ.

ಆ) ಸಿದ್ದಾಪುರ ತಾಲ್ಲೂಕು. — ೨) ಹೊನ್ನೆಕೊಂಬು ಗ್ರಾಮಕ್ಕೆ ಕೂಡು ರಸ್ತೆ.

ಚಿಕ್ಕ ಹಳ್ಳಿಯಲ್ಲಿ ಮಾಧ್ಯಮಿಕ ಹಾಗೂ ಪ್ರೌಢ ಶಾಲೆಗಳ ಮಂಜೂರಾತಿ ಬಗ್ಗೆ

೨೦(೧೩೭) ಶ್ರೀ ಗೋಪಾಲ ಮುಕುಂದ ಕಾವಡೆ (ಸಿಸಿಗ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ :—

ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆ ಮಾಗಡಿ ತಾಲ್ಲೂಕಿನ ತಿಪ್ಪಸಂದ್ರ ಹೋಬಳಿ ಚಿಕ್ಕಹಳ್ಳಿ ಗ್ರಾಮದಲ್ಲಿ ಮಾಧ್ಯಮಿಕ ಹಾಗೂ ಪ್ರೌಢಶಾಲೆಗಳಿಲ್ಲದೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಆ ಹಳ್ಳಿಯ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಮಂಜೂರಾಗಬೇಕಾಗಿದ್ದ ಶಾಲೆಗಳನ್ನು ಒದಗಿಸದಿರಲು ಕಾರಣಗಳೇನು ?

ಇ) ಸದರಿ ಗ್ರಾಮಕ್ಕೆ ಸೂಕ್ತ ಶಾಲೆಗಳನ್ನು ಒದಗಿಸಲು ಸರ್ಕಾರದವರು ಸೂಕ್ತ ಕ್ರಮ ಕೈಗೊಳ್ಳುವರೇ ?

ಶ್ರೀ ಡಿ. ಮಂಜುನಾಥ್.—(ಶಿಕ್ಷಣ ಮಂತ್ರಿಗಳು)

ಅ) ಬಂದಿದೆ.

ಆ) ಈಗ ಸಧ್ಯಕ್ಕೆ ಅವಶ್ಯಕತೆ ಕಂಡು ಬರುವುದಿಲ್ಲ.

ಇ) ಅವಶ್ಯಕತೆಯನ್ನು ಪರಿಶೀಲಿಸಿ ಮಾಧ್ಯಮಿಕ ಶಾಲೆಯನ್ನು ಮಂಜೂರು ಮಾಡಲು ಪರಿಶೀಲಿಸಲಾಗುವುದು.

ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತಿನ ನಿಯಮಗಳ ಅನುಷ್ಠಾನದ ಬಗ್ಗೆ

೨೧ (೧೩೯) ಶ್ರೀ ಗೋಪಾಲ ಮುಕುಂದ ಕಾವಡೆ (ಸಿಸಿಗ).— ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ :—

ಅ) ರಾಜ್ಯದಲ್ಲಿ ಪಾಲಿಟೆಕ್ನಿಕ್ ತಾಂತ್ರಿಕ ಶಿಕ್ಷಣದ ಗುಣಮಟ್ಟವನ್ನು ಕಾಪಾಡಲು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತಿನ (ಐ. ಸಿ. ಟಿ. ಇ. ನಾರಮ್ಸ್) ನಿಯಮಗಳು ಏನಾದರೂ ಇವೆಯೇ ?

ಆ) ಹಾಗಿದ್ದಲಿ ರಾಜ್ಯದಲ್ಲಿನ ಎಲ್ಲಾ ಪಾಲಿಟೆಕ್ನಿಕ್‌ಗಳಲ್ಲಿ ಸದರಿ ನಿಯಮಗಳನ್ನು ಅನುಸರಿಸಲಾಗುತ್ತಿದೆಯೇ ?

ಇ) ಹಾಗಿಲ್ಲದಿದ್ದಲ್ಲಿ ಈ ನಿಯಮಗಳ ಪಾಲನೆಗೆ ಸರ್ಕಾರದವರು ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

ಅ) ಇವೆ.

ಆ) ಇತ್ತೀಚೆಗೆ ಅನುಮತಿ ನೀಡಲಾದ ಖಾಸಗೀ ಪಾಲಿಟೆಕ್ನಿಕ್‌ಗಳನ್ನು ಬಿಟ್ಟು ಉಳಿದ ಪಾಲಿಟೆಕ್ನಿಕ್‌ಗಳು ನಿಯಮಗಳನ್ನು ಅನುಸರಿಸುತ್ತಿದೆ.

ಇ) ಸರ್ಕಾರಿ ಮತ್ತು ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ಎಐಸಿಟಿಇ ನಾರಮ್ಸ್‌ಗಳ ಪ್ರಕಾರ ಬೇಕಾದಂತ ಎಲ್ಲಾ ಸೌಲಭ್ಯಗಳನ್ನು ಪೂರೈಸಲಾಗಿದೆ ಆದರೆ ಇತ್ತೀಚೆಗೆ ಅನುಮತಿ ನೀಡಲಾದ ಖಾಸಗಿ ಪಲಯದಲ್ಲಿರುವ ಪಾಲಿಟೆಕ್ನಿಕ್‌ಗಳಲ್ಲಿ ಈ ಸೌಲಭ್ಯಗಳನ್ನು ತೃಪ್ತಿಕರವಾಗಿ ಪೂರೈಸಲಾಗಿಲ್ಲ ಎಂದು ಗಮನಕ್ಕೆ ಬಂದಿದೆ. ಇದನ್ನು ಪೂರೈಸಲು ಸಂಬಂಧಪಟ್ಟ ಟ್ರಸ್ಟಿಪಾಲರಿಗೆ ಸೂಕ್ತ ಕ್ರಮ ತೆಗೆದುಕೊಳ್ಳುವ ಬಗ್ಗೆ ನಿರ್ದೇಶಿಸಲಾಗಿದೆ.